# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1421 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 16/03/2026 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅನುದಾನಿತ ITI ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಇತ್ತೀಚೆಗೆ ಪರಿಷ್ಕರಣೆ ಮಾಡಿದ ಅನುದಾನ ಸಂಹಿತೆಯಂತೆ ಇಂಜಿನಿಯರಿಂಗ್ ಡ್ರಾಯಿಂಗ್ ಹಾಗೂ ಕಾರ್ಯಗಾರ ಲೆಕ್ಕಾಚಾರ ವಿಷಯಗಳ ಕಾರ್ಯಭಾರದಲ್ಲಿ ಬದಲಾವಣೆ ತಂದಿರುವುದು ನಿಜವೇ; | ಹೌದು. |
| ಆ) | ಹಾಗಿದ್ದಲ್ಲಿ, ಎಷ್ಟು ಯೂನಿಟ್‌ಗಳಿಗೆ (ವಿದ್ಯಾರ್ಥಿಗಳಿಗೆ) ಒಬ್ಬ ಜೂನಿಯರ್ ಟ್ರೈನಿಂಗ್ ಆಫೀಸರ್ ಎಂದು ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ; ಅದರಂತೆ, ಎರಡನೇ ಜೂನಿಯರ್ ಟ್ರೈನಿಂಗ್ ಆಫೀಸರ್ ನೇಮಿಸಿಕೊಳ್ಳಲು ಎಷ್ಟು ಯೂನಿಟ್ (ವಿದ್ಯಾರ್ಥಿಗಳು) ಇರಬೇಕೆಂದು ನಿಗದಿಪಡಿಸಲಾಗಿದೆ; ಮಾಹಿತಿ ಒದಗಿಸುವುದು; | ಪರಿಷ್ಕೃತ ಅನುದಾನ ಸಂಹಿತೆ-2025ರಲ್ಲಿನ Staff Pattern For Private ITI's Eligible For Grant-In-Aid ರಲ್ಲಿ 08 ಯೂನಿಟ್‌ಗಳಿಗೆ (160 ವಿದ್ಯಾರ್ಥಿಗಳಿಗೆ) ಒಬ್ಬರು ಕಿರಿಯ ತರಬೇತಿ ಅಧಿಕಾರಿ ರವರು ಇಂಜಿನಿಯರಿಂಗ್ ಡ್ರಾಯಿಂಗ್ ಹಾಗೂ ಕಾರ್ಯಾಗಾರ ಲೆಕ್ಕಾಚಾರ ವಿಷಯಗಳ ಬೋಧನೆಗೆ ನೇಮಕ ಮಾಡಿಕೊಳ್ಳಲು ಹಾಗೂ 14 ಯೂನಿಟ್ ಗಳಿಗೆ (280 ವಿದ್ಯಾರ್ಥಿಗಳಿಗೆ) ಎರಡನೇ ಕಿರಿಯ ತರಬೇತಿ ಅಧಿಕಾರಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. |
| ಇ) | ಡಿಜಿಇಟಿ ಸೂಚಿಸಿರುವ ನಿಯಮದಂತೆ ಇಂಜಿನಿಯರಿಂಗ್ ಡ್ರಾಯಿಂಗ್ ಹಾಗೂ ಕಾರ್ಯಗಾರ ಲೆಕ್ಕಾಚಾರ ವಿಷಯ ಬೋಧಕರಿಗೆ ನಿಗದಿಪಡಿಸಿರುವ ಕಾರ್ಯಭಾರ ಎಷ್ಟು; ವಿವರವಾದ ಮಾಹಿತಿ ನೀಡುವುದು; | ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು 2021-22ನೇ ಸಾಲಿನಿಂದ ಪ್ರತಿ ವಿಷಯವನ್ನು ವಾರ್ಷಿಕವಾಗಿ ಬೋಧಿಸಲು 80 ಘಂಟೆಗಳ ಅವಧಿ ಹಾಗೂ 50 ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತಿರುವುದನ್ನು ಡಿಜಿಟಿ ರವರು ಪ್ರತಿ ವಿಷಯವನ್ನು ವಾರ್ಷಿಕವಾಗಿ ಬೋಧಿಸಲು 40 ಘಂಟೆಗಳ ಅವಧಿಗೆ ನಿಗಧಿಪಡಿಸಿ, ಪ್ರತಿ ವಿಷಯಕ್ಕೆ 12 ಅಂಕಗಳಿಗೆ ಪರೀಕ್ಷೆ ನಿಗಧಿಪಡಿಸಿರುತ್ತಾರೆ ಹಾಗೂ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು ವೃತ್ತಿತತ್ವ (Trade Theory) ವಿಷಯದ ಜೊತೆ ವಿಲೀನಗೊಳಿಸಲಾಗಿರುತ್ತದೆ. ವಾರ್ಷಿಕವಾಗಿ ಪ್ರತಿ ವಿಷಯ ಬೋಧಿಸಲು 40 ಘಂಟೆಗಳ ಕಾಲಾವಧಿ ಸೀಮಿತಗೊಳಿಸಿ Trade Theory Subject ಜೊತೆಗೆ ವಿಲೀನಗೊಳಿಸಿರುವುದರಿಂದ ಒಂದು ವೃತ್ತಿ ಘಟಕಕ್ಕೆ ವಾರದಲ್ಲಿ ಪ್ರತಿ ವಿಷಯಕ್ಕೆ 45 ನಿಮಿಷಗಳ ಅವಧಿ ಬೋಧಿಸಬೇಕಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ಡಿ.ಜಿ.ಟಿ ರವರ ಪತ್ರ ಸಂಖ್ಯೆ MSDE (DGT)-0708/2022-CD Dated: 10.11.2022 ಮತ್ತು DGT-MIS011/1/2025-O/o DIR (TC) [57369] Dated.16.01.2026ರಲ್ಲಿ, ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳ ಬೋಧನೆಗೆ ಕ್ರಮವಾಗಿ ಪ್ರತಿ 144 ತರಬೇತಿದಾರರಿಗೆ ಒಬ್ಬರು ಕಿರಿಯ ತರಬೇತಿ ಅಧಿಕಾರಿ ಹಾಗೂ ಹೆಚ್ಚುವರಿಯಾಗಿ ಪ್ರವೇಶಾತಿ ಪಡೆಯುವ ಪ್ರತಿ 144 ತರಬೇತಿದಾರರಿಗೆ ಒಬ್ಬರು ಕಿರಿಯ ತರಬೇತಿ ಅಧಿಕಾರಿ ಬೋಧಿಸಲು ಅವಶ್ಯವಿರುವುದಾಗಿ ತಿಳಿಸಿರುತ್ತಾರೆ. |

--2

| | | |
|---|---|---|
| | | ಡಿ.ಜಿ.ಟಿ ರವರು ವೃತ್ತಿ ವಿಷಯವನ್ನು ಬೋಧಿಸಲು 40 ಗಂಟೆಗಳಿಗೆ ಸೀಮಿತಗೊಳಿಸಿರುವುದರಿಂದ 1997ರ ಅನುದಾನ ಸಂಹಿತೆಯಲ್ಲಿ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳ ಬೋಧನೆಗೆ ಪ್ರತಿ 4 ಘಟಕಕ್ಕೆ ಒಬ್ಬರು ಕಿರಿಯ ತರಬೇತಿ ಅಧಿಕಾರಿಯವರಿಗೆ ವೇತನಾನುದಾನ ನೀಡಲು ಅವಕಾಶವಿರುತ್ತದೆ. ಸದರಿ ವಿಷಯಗಳ ಬೋಧನಾ ಅವಧಿ ಹಾಗೂ ಪರೀಕ್ಷಾ ಅಂಕಗಳನ್ನು ಡಿಜಿಟಿ ರವರು ಕಡಿತಗೊಳಿಸಿರುವುದರಿಂದ ಪರಿಷ್ಕೃತ ಅನುದಾನ ಸಂಹಿತೆ 2025 ರ ಷಡ್ಯೂಲ್-2 ರಲ್ಲಿ 8 ಘಟಕಗಳಿಗೆ (160 ತರಬೇತಿದಾರರು) ಒಬ್ಬರು ಕಿರಿಯ ತರಬೇತಿ ಅಧಿಕಾರಿಯವರಿಗೆ ವೇತನಾನುದಾನ ನೀಡಲು ಅವಕಾಶವಿರುತ್ತದೆ ಹಾಗೂ ಸದರಿ 8 ಘಟಕದಲ್ಲಿನ 160 ತರಬೇತಿದಾರರಿಗೆ ಬೋಧಿಸಲು ವಾರಕ್ಕೆ 12 ಘಂಟೆಗಳ ಬೋಧನಾ ಕಾರ್ಯಭಾರವಿರುತ್ತದೆ. |
| ಈ) | ಪರಿಷ್ಕೃತ ಅನುದಾನ ಸಂಹಿತೆಯ ಹಿನ್ನಲೆಯಲ್ಲಿ, ಕಾರ್ಯಭಾರ ಹೆಚ್ಚಿಸಿರುವ ITI ಸಂಸ್ಥೆಗಳಲ್ಲಿ ಜೂನಿಯರ್ ಟ್ರೈನಿಂಗ್ ಆಫೀಸರ್ ಹೆಚ್ಚುವರಿ ಆಗುವ ಸನ್ನಿವೇಶ ಸೃಷ್ಟಿ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು); | ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು ಡಿ.ಜಿ.ಟಿ ರವರು ವೃತ್ತಿ ವಿಷಯವನ್ನು ಬೋಧಿಸಲು 40 ಗಂಟೆಗಳಿಗೆ ಸೀಮಿತಗೊಳಿಸಿ Trade Theory Subject ಜೊತೆಗೆ ವಿಲೀನಗೊಳಿಸಿರುವುದರಿಂದ ಹೆಚ್ಚುವರಿ ಸಿಬ್ಬಂದಿಯನ್ನು ಪರಿಷ್ಕೃತ ಅನುದಾನ ಸಂಹಿತೆ 2025 ರ CHAPTER V ನಿಯಮ 8 ಕಂಡಿಕೆ (23) ರಂತೆ ಒಂದೇ ಆಡಳಿತ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಹಾಗೂ ಇತರೆ ಅನುದಾನಿತ ಸಂಸ್ಥೆಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆಗಳ ಎದುರಿಗೆ ಡಿ.ಜಿ.ಟಿ ನಿಯಮಾನುಸಾರ ಬೋಧಿಸಲು ಅರ್ಹರಿರುವ ಅನುದಾನಿತ ಸಿಬ್ಬಂದಿಯವರನ್ನು ವರ್ಗಾಯಿಸಲು ಸಂಸ್ಥೆಗಳ ಆಡಳಿತ ಮಂಡಳಿಯವರ ಪರಸ್ಪರ ಸಹಮತಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲು ಆಯುಕ್ತಾಲಯದಿಂದ ದಿನಾಂಕ:17/02/2026 ರಂದು ಸುತ್ತೋಲೆ ಹೊರಡಿಸಿ, ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಹೆಚ್ಚುವರಿ ಹುದ್ದೆಗಳನ್ನು ಖಾಲಿ ಹುದ್ದೆಗಳ ಎದುರಿಗೆ ವರ್ಗಾಯಿಸಲು ಕ್ರಮವಹಿಸಲಾಗುವುದು. |

**ಸಂಖ್ಯೆ: ಕೌಉಜೀಇ 15 ಕೈತಪ್ರ 2026**

(ಡಾ. ಶರಣಪ್ರಕಾಶ ಆರ್ ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.